ಕರ್ನಾಟಕ ಸರ್ಕಾರ

ಸಂಖ್ಯೆ:ಪಿಯು-1/ಆವಿಎ/ಅಉಕು/2016-17

ನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು-560012
ದಿನಾಂಕ 12-12-2016.

## ಜ್ಞಾಪನ

ವಿಷಯ: ಅತಿಥಿ ಉಪನ್ಯಾಸಕರುಗಳಿಗೆ ವೇತನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರ ಆದೇಶದ ಸಂಖ್ಯೆ: ಇಡಿ 72 ಎಸ್‌ಟಿಬಿ 2016 ದಿನಾಂಕ 04-07-2016.
2. ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ 20-08-2016.
3. ಸರ್ಕಾರ ಆದೇಶದ ಸಂಖ್ಯೆ: ಇಡಿ 162 ಎಸ್‌ಟಿಬಿ 2016 ದಿನಾಂಕ 26-10-2016.
4. ಅತಿಥಿ ಉಪನ್ಯಾಸಕರುಗಳಿಗೆ ವೇತನ ಬಿಡುಗಡೆ ಮಾಡಲು ಕೋರಿ ವಿವಿಧ ಜಿಲ್ಲೆಗಳಿಂದ ಜಿಲ್ಲಾ ಉಪ ನಿರ್ದೇಶಕರುಗಳು ಸಲ್ಲಿಸಿರುವ ಪ್ರಸ್ತಾವನೆಗಳು.

* * * *

ಉಲ್ಲೇಖ-1ರ ಸರ್ಕಾರದ ಆದೇಶದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ 1130 ಉಪನ್ಯಾಸಕ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಲಾಗಿದೆ. ಉಲ್ಲೇಖ-02ರ ಈ ಕಛೇರಿ ಪತ್ರದಲ್ಲಿ 2016-17ನೇ ಸಾಲಿಗೆ ಹೆಚ್ಚುವರಿಯಾಗಿ 322 ಅತಿಥಿ ಉಪನ್ಯಾಸಕರ ನೇಮಕಾತಿಗೆ ಅನುಮತಿ ನೀಡಲು ಸರ್ಕಾರವನ್ನು ಕೋರಿದ ಹಿನ್ನೆಲೆಯಲ್ಲಿ ಉಲ್ಲೇಖ-3ರಲ್ಲಿ ಸರ್ಕಾರವು 322 ಅತಿಥಿ ಉಪನ್ಯಾಸಕರುಗಳ ನೇಮಕಾತಿಗೆ ಅನುಮತಿ ನೀಡುವುದರ ಮೂಲಕ ಒಟ್ಟಾರೆಯಾಗಿ 1452 ಅತಿಥಿ ಉಪನ್ಯಾಸಕರ ನೇಮಕಾತಿಗೆ ಅನುಮತಿ ನೀಡಿರುತ್ತದೆ.

ಸರ್ಕಾರದ ಆದೇಶದಂತೆ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ನಿಧನ, ನಿವೃತ್ತಿ, ಬಡ್ತಿ, ವರ್ಗಾವಣೆ ಹೀಗೆ ವಿವಿಧ ಕಾರಣಗಳಿಂದ ತೆರವಾದ ಉಪನ್ಯಾಸಕ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರುಗಳನ್ನು ಜಿಲ್ಲಾ ಉಪ ನಿರ್ದೇಶಕರು ನೇಮಕ ಮಾಡಿಕೊಂಡಿರುತ್ತಾರೆ. ಸದರಿ ಉಪನ್ಯಾಸಕರುಗಳಿಗೆ ಗೌರವ ಧನವನ್ನು ಬಿಡುಗಡೆ ಮಾಡುವಂತೆ ಕೋರಿ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರುಗಳು ಉಲ್ಲೇಖ-4ರಲ್ಲಿ ಕೋರಿಕೆ ಸಲ್ಲಿಸಿರುತ್ತಾರೆ.

2016-17ನೇ ಸಾಲಿಗೆ ಸದರಿ ಅತಿಥಿ ಉಪನ್ಯಾಸಕರುಗಳಿಗೆ ಆರು ತಿಂಗಳ ಅವಧಿಗೆ (ಮಧ್ಯಂತರ ರಜೆಯನ್ನು ಹೊರತುಪಡಿಸಿ) ಮಾಸಿಕ ರೂ.7000/-ರೂ. (ಏಳು ಸಾವಿರ ಮಾತ್ರ) ಗಳಂತೆ ಗೌರವ ಧನವನ್ನು ಬಿಡುಗಡೆ ಮಾಡಿದೆ. ಸಂಬಂಧಪಟ್ಟ ಜಿಲಾ ಉಪ ನಿರ್ದೇಶಕರುಗಳು ಉಲ್ಲೇಖ-1ರ ಸರ್ಕಾರದ ಆದೇಶ ಹಾಗೂ ಅದರಲ್ಲಿನ ಷರತ್ತುಗಳ ಅನ್ವಯ ಮತ್ತು ಸದರಿ ಅತಿಥಿ ಉಪನ್ಯಾಸಕರುಗಳು ಕಾರ್ಯ ನಿರ್ವಹಿಸಿರುವುದನ್ನು ಖಚಿತಪಡಿಸಕೊಂಡ ನಂತರವೇ ವೇತನ ಬಿಡುಗಡೆಗೆ ಕ್ರಮ ವಹಿಸತಕ್ಕದ್ದು. ಬಳಕೆಯಾದ ಹಣ ಮೊತ್ತದ ವಿವರಗಳನ್ನು ವಿತರಣೆಯಾದ ಕೂಡಲೇ ಕೇಂದ್ರ ಕಚೇರಿಯ ಲೆಕ್ಕ ಪತ್ರ ಶಾಖೆಗೆ ಕ್ರೋಢೀಕರಿಸಿ ಸಲ್ಲಿಸುವುದು. ಹಣ ಬಿಡುಗಡೆಗೊಳಿಸಿದ ಜಿಲ್ಲಾವಾರು ವಿವರ ಈ ಮುಂದಿನಂತಿದೆ.

| ಕ್ರ. ಸಂ | ಜಿಲ್ಲೆಗಳ ಹೆಸರು | ನೇಮಕಾತಿ ಮಾಡಿಕೊಂಡ ಅತಿಥಿ ಉಪನ್ಯಾಸಕರುಗಳ ಸಂಖ್ಯೆ | ಬಿಡುಗಡೆ ಮಾಡಿದ ಗೌರವ ಧನದ ಮೊತ್ತ ರೂ.ಗಳಲ್ಲಿ |
|---|---|---|---|
| 1 | ಬೆಂಗಳೂರು(ಉತ್ತರ) | 05 | 2,10,000 |
| 2. | ಬೆಂಗಳೂರು(ದಕ್ಷಿಣ) | 08 | 3,36,000 |
| 3. | ಬೆಂಗಳೂರು(ಗ್ರಾ) | 07 | 2,94,000 |
| 4. | ರಾಮನಗರ | 18 | 7,56,000 |
| 5. | ಬಳ್ಳಾರಿ | 33 | 13,86,000 |
| 6. | ಬೆಳಗಾವಿ | 85 | 35,70,000 |
| 7. | ವಿಜಯಪುರ | 43 | 18,06,000 |
| 8. | ಬಾಗಲಕೋಟೆ | 55 | 23,10,000 |
| 9. | ಬೀದರ್ | 42 | 17,64,000 |
| 10. | ಚಿತ್ರದುರ್ಗ | 22 | 9,24,000 |
| 11. | ದಾವಣಗೆರೆ | 19 | 7,98,000 |
| 12. | ಚಿಕ್ಕಮಗಳೂರು | 40 | 16,80,000 |
| 13. | ಧಾರವಾಡ | 14 | 5,88,000 |
| 14. | ಗದಗ | 70 | 29,40,000 |
| 15.. | ಹಾವೇರಿ | 55 | 23,10,000 |
| 16. | ಕಲಬುರಗಿ | 78 | 32,76,000 |
| 17. | ಯಾದಗಿರಿ | 72 | 30,24,000 |
| 18. | ಹಾಸನ | 79 | 33,18,000 |
| 19. | ಕೋಲಾರ | 57 | 23,94,000 |
| 20. | ಚಿಕ್ಕಬಳ್ಳಾಪುರ | 59 | 24,78,000 |
| 21. | ಮೈಸೂರು | 51 | 21,42,000 |
| 22. | ಚಾಮರಾಜನಗರ | 26 | 10,92,000 |
| 23. | ಮಂಡ್ಯ | 38 | 15,96,000 |
| 24. | ಉತ್ತರ ಕನ್ನಡ | 69 | 28,98,000 |
| 25. | ರಾಯಚೂರು | 108 | 45,36,000 |
| 26. | ಕೊಪ್ಪಳ | 66 | 27,72,000 |
| 27. | ದಕ್ಷಿಣ ಕನ್ನಡ | 61 | 25,62,000 |
| 28. | ಉಡುಪಿ | 42 | 17,64,000 |
| 29. | ಶಿವಮೊಗ್ಗ | 26 | 10,92,000 |
| 30. | ತುಮಕೂರು | 81 | 34,02,000 |
| 31 | ಕೊಡಗು | 23 | 9,66,000 |
| **ಒಟ್ಟು** | | **1452** | **6,09,84,000** |

ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2202-02-109-0-13-059 (NP) ಅಡಿಯಲ್ಲಿ ಹಂಚಿಕೆ ಮಾಡುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಇವರಿಗೆ,

ಲೆಕ್ಕಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು- ಇವರಿಗೆ ಮುಂದಿನ ಸೂಕ್ತ ಕ್ರಮಕ್ಕೆ.